44(159) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪುಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಿಜಾಪುರ ನಗರದ ಜುಮ್ಮಾ ಮಸೀದಿ ಹಿಂದಿನ ಪ್ರದೇಶದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಿದ ಮನೆಗಳು ತೀರ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ;

ಇ) ಈ ಪ್ರದೇಶದಲ್ಲಿ ರಸ್ತೆ, ನೀರು ಮತ್ತು ಮೂಲಭೂತ ಸೌಲಭ್ಯಗಳಿಲ್ಲದೇ ಇದೊಂದು ಕೊಳಚೆ ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಪ್ರದೇಶಕ್ಕೆ ಮೂಲಭೂತ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು;

ಉ) ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಬಿಜಾಪುರ ನಗರದ ಮಹಲ್ ಬಾಗಯತ್ ಸ್ಥಳದ ಬಡಾವಣೆಯಲ್ಲಿ ಮಂಡಳಿಯು ಸಂಯುಕ್ತ ವಸತಿ ಯೋಜನೆಯನ್ವಯ ವಿವಿಧ ವರ್ಗಗಳಲ್ಲಿ ಒಟ್ಟು 404 ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿ ಗುತ್ತಿಗೆ ನೀಡಲಾಗಿತ್ತು. ಆದರೆ ಈ ಕೆಲಸವನ್ನು ವಹಿಸಿದ ಗುತ್ತಿಗೆದಾರರು, ಕಾಮಗಾರಿಗಳನ್ನು ಪ್ರಾರಂಭಿಸಿ ಆಯಾ ಹಂತದಲ್ಲಿಯೇ ಅಪೂರ್ಣ ನಿರ್ಮಾಣಗಳನ್ನು ಮಾಡಿ ತದನಂತರ ದರಗಳಿಗೆ ಸಂಬಂಧಿಸಿದಂತೆ ಮಂಡಳಿಯ ವಿರುದ್ಧ ಮಾನ್ಯ ಉಚ್ಚ-ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು. ಇದರಿಂದಾಗಿ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಅಪೂರ್ಣವಾಗಲು ಕಾರಣವಾಯಿತು. ಈ ವಿಳಂಬತೆಯನ್ನು ಮಂಡಳಿಯು ಪರಿಶೀಲಿಸಿ ಸಾರ್ವಜನಿಕರ ಬೇಡಿಕೆ ಅನುಗುಣವಾಗಿ ಹೇಗಿದೆಯೋ ಹಾಗೆ ಯಾವುದೇ ನಿರ್ವಹಣಾ ಶುಲ್ಕವಿಲ್ಲದೆ ತಗಲಿದ ಭೌತಿಕ ವಾಸ್ತವಿಕ ವೆಚ್ಚದೊಂದಿಗೆ ರಿಯಾಯಿತಿಯ ಸೌಲಭ್ಯವನ್ನು ಸಹಾ ನೀಡಿ ಹಂಚಿಕೆ ಮಾಡಲಾಗಿದೆ. ಗುತ್ತಿಗೆದಾರರು ಕಾಮಗಾರಿಗಳ ನಿರ್ಮಾಣವನ್ನು ಸ್ಥಗಿತ ಗೊಳಿಸಿರುವುದರಿಂದ ಈ ನಿರ್ಮಾಣದಲ್ಲಿನ ಮನೆಗಳು ಅಪೂರ್ಣವಾಗಲು ಕಾರಣವಾಯಿತೇ ಹೊರತು ಈ ರೀತಿಯ ಕಾಮಗಾರಿಗಳು ಮಂಡಳಿಯ ಉದ್ದೇಶಿತ ನಿರ್ವಾಣವಾಗಿರುವುದಿಲ್ಲ.

ಆ) ಈ ಮನೆಗಳ ನಿರ್ವಾಣಗಳನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿ ಮಾನ್ಯ ನ್ಯಾಯಾಲಯದಲ್ಲಿ ಹೆಚ್ಚಿನ ದರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಸಾರ್ವಜನಿಕರ ಬೇಡಿಕೆಯ ಮೇರೆಗೆ ಅಪೂರ್ಣವಾದ ಮನೆಗಳನ್ನು ವಿಲೇವಾರಿ ಮಾಡಲಾಗಿದೆ. ಇದರಿಂದ ಮಂಡಳಿಗೆ ಯಾವುದೇ ನಷ್ಟ ಉದ್ಭವಿಸಿರುವುದಿಲ್ಲ. ಅಪೂರ್ಣವಾಗ ಮನೆಗಳನ್ನು ಹೇಗಿವೆಯೋ ಹಾಗೆ ವಿಲೇವಾರಿ ಮಾಡಲಾಗಿದೆ. ಹಾಗೂ ಈ ಮನೆಗಳ ಗುಣಮಟ್ಟದ ಬಗ್ಗೆ ಟಾರ್ ಸ್ಟೀಲ್ ಸಂಸ್ಥೆ, ಬೆಂಗಳೂರು ಇವರು ಪರಿಶೀಲಿಸಿ ತೃಪ್ತಿಕರವಾಗಿದೆಂದು ದೃಢೀಕರಿಸಿರುತ್ತದೆ.

ಇ) ಈ ಬಡಾವಣೆಗೆ ನಾಗರೀಕ ಮೂಲ ಸೌಲಭ್ಯಗಳಾದ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಸೌಕರ್ಯ, ಒಳಚರಂಡಿ, ಹಾಗೂ ನೈರ್ಮಲ್ಯ ವ್ಯವಸ್ಥೆ, ಹೊರವಿದ್ಯುತ್ ಸೌಕರ್ಯಗಳು ಇತ್ಯಾದಿಗಳನ್ನು ಒದಗಿಸಲಾಗಿದೆ. ಈ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಲಾಗಿದ್ದು ಸ್ಥಳೀಯ ಸಂಸ್ಥೆಯಾದ ನಗರಸಭೆಗೆ ಹಸ್ತಾಂತರಿಸುವ ಬಗ್ಗೆ ಪ್ರಕ್ರಿಯೆಯು ಚಾಲನೆಯಲ್ಲಿದೆ.

ಈ) ರಸ್ತೆಗಳಿಗೆ ಡಾಂಬರೀಕರಣ ಹೊರತುಪಡಿಸಿ ಉಳಿದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಸದರಿ ಬಡಾವಣೆಯನ್ನು ಬಿಜಾಪುರದ ನಗರಸಭೆಗೆ ಹಸ್ತಾಂತರ ಮಾಡುವ ಕಾರ್ಯವು ಚಾಲ್ತಿಯಲ್ಲಿದೆ ಈ ಬಡಾವಣೆಯಲ್ಲಿನ ಮನೆಗಳು ಹಂಚಿಕೆದಾರರಿಗೆ ಈಗಾಗಲೇ ಯಾವುದೇ ಅಭಿವೃದ್ಧಿ ಶುಲ್ಕಗಳನ್ನು ವಿಧಿಸದೇ ವಾಸ್ತವಿಕ ವೆಚ್ಚದ ಮೇಲೆ ನೀಡಿ ಮೂಲ ಸೌಲಭ್ಯಗಳನ್ನು ನೀಡಿರುವುದರಿಂದ ಹಾಗೂ ಈ ಯೋಜನೆಯ ಮನೆಗಳಿಗೆ ಅಂತಿಮ ಬೆಲೆ ನಿಗದಿ ಮಾಡಿರುವುದರಿಂದ ಉಳಿದ ಅಭಿವೃದ್ಧಿ ಕೆಲಸಗಳನ್ನು ಮಾಡಲು ಅವಕಾಶವಿರುವುದಿಲ್ಲ. ಉಳಿದ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಯೇ ನಿರ್ವಹಿಸಬೇಕಾಗಿರುತ್ತದೆ.

ಉ) ಈ ಬಡಾವಣೆಯು ಬಹಳ ಹಳೆಯದಾಗಿದ್ದು, ಮೂಲ ಅಭಿವೃದ್ಧಿ ಕೆಲಸಗಳನ್ನು ಯೋಜನಾ ಸಮಯದಲ್ಲಿ ಮಾಡಲಾಗಿದೆ. ಹಳೆಯ ಬಡಾವಣೆಗಳ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾಗಿರುತ್ತದೆ.

45(43) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರದ ಕೇಂದ್ರ ಸ್ಥಾನದಿಂದ ಸಂತೇಮರಳ್ಳಿಯಲ್ಲಿ "ಕ್ಷೇತ್ರ ಶಿಕ್ಷಣಾಧಿಕಾರಿಗಳ" ಕಛೇರಿಯನ್ನು ತೆರೆಯುವ ಬಗ್ಗೆ ಸರ್ಕಾರ ಚಿಂತನೆಗಳೇನಾದರು ನಡೆದಿದೆಯೇ?

ಆ) ನಡೆದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

46(45) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಬಿನಿ ಎರಡನೇ ಹಂತ ನೀರಾವರಿ ಯೋಜನೆಯ ಸರ್ವೇ ಕಾರ್ಯ ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು ;

ಇ) ಈ ಯೋಜನೆ ಪೂರ್ಣಗೊಳಿಸಲು ಇರುವ ಕಾಲಮಿತಿ ಎಷ್ಟು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಸರ್ವೇ ಕಾರ್ಯ ಪೂರ್ಣಗೊಂಡಿದೆ.